**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಶೃಂಗೇರಿ</u>**

**<u>ಸಿ.ಸಿ.ನಂಃ92/2022</u>**

**<u>ಫಿರ್ಯಾದುದಾರರು</u>**ಃ ಶ್ರೀ. ಎಸ್. ನಾಗೇಶ್, ಬಿನ್. ಸಾಧು ಪೂಜಾರಿ,
ವಯಸ್ಸು ಸುಮಾರು 49 ವರ್ಷ, ಬ್ಯೂಸಿನೇಸ್,
ವಾಸಃ ಸಂಕ್ಲಾಪುರ, ಶೃಂಗೇರಿ
ಶೃಂಗೇರಿ ತಾಲ್ಲೂಕು.

**ಃ ವಿರುದ್ಧ ಃ**

**<u>ಆರೋಪಿ</u>** ಃ ಶ್ರೀ ರಾಘವೇಂದ್ರ, ಬಿನ್. ಕೋಸೆ ಮರ್ಕಲ್,
ವಯಸು ಸುಮಾರು 40 ವರ್ಷ, ಸಿವಿಲ್ ಕಾಂಟ್ರ್ಯಾಕ್ಟರ್,
ವಾಸಃ ಕೋಟ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ,
ಈಗ ವಾಸಃ ಕೋಂ.ಮಹಮದ್ ಮಾಜರ್,
ಗಂಧರ್ವ ಹೋಟೆಲ್ ಎದುರು, ಭಾರತೀ ಬೀದಿ,
ಶೃಂಗೇರಿ ಟೌನ್, ಶೃಂಗೇರಿ ತಾಲ್ಲೂಕು.

*****

**<u>ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿ ಹೇಳಿಕೆ</u>**

ಪ್ರಶ್ನೆ.1 ಃ ಫಿರ್ಯಾದುದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ ಃ

ಪ್ರಶ್ನೆ.2 ಃಫ್ರಾ.ಸಾ.1 ಎಸ್. ನಾಗೇಶ್, ಬಿನ್ ಸಾಧು ಪೂಜಾರಿ, ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ಸುಮಾರು ವರ್ಷಗಳಿಂದ ಪರಿಚಯ ಇದ್ದು, ನಿಮ್ಮ ಕಾಂಟ್ರ್ಯಾ ಕ್ಟ್ ಕೆಲಸದ ಅವಶ್ಯಕತೆಗಳಿಗೋಸ್ಕರ ಫಿರ್ಯಾದಿಯಿಂದ ಜಲ್ಲಿ, ಎಂ-ಸಾಂಡ್ ಮರಳು, ಜೆ.ಸಿ.ಬಿಯನ್ನು ನಿಮ್ಮ ಅವಶ್ಯಕತೆಗಾಗಿ ಅವರು ಒದಗಿಸಿ ರೂ. 12,00,000-00 ಗಳ ಹಣವನ್ನು ಕೊಡಬೇಕಾಗಿರುತ್ತದೆ. ನಂತರ ಸದರಿ ಹಣದ ಮರುಪಾವತಿಸಲು ದಿನಾಂಕಃ10.11.2021 ರ ಒಳಗೆ ಕೊಡುವುದಾಗಿ ಹೇಳಿ ನಿಮ್ಮ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್‌ಗೆ ಎರಡು ಚೆಕ್‌ಗಳು ಸಂಖ್ಯೆಃ031926 ದಿನಾಂಕಃ26.11.2021 ರಂದು ರೂ.6,00,000-00 ಮತ್ತು ಸಂಖ್ಯೆಃ031927 ದಿನಾಂಕಃ26.11.2021 ರಂದು ರೂ.6,00,000-00 ಎಂದು ನಮೂದಿಸಿ ನೀಡಿರುತ್ತೀರಿ ಎಂದು ಹೇಳಿದ್ದಾರೆ, ಇದಕ್ಕೆ ನೀವೇನ್ನು ಹೇಳುತ್ತೀರಿ?

ಉತ್ತರ ಃ

ಪ್ರಶ್ನೆ.3 ಃಫ್ರಾ.ಸಾ.1 ರವರು ಮುಂದುವರೆದು ಆರೋಪಿಯಾದ ನಿಮ್ಮ ಮಾತಿನ ಮೇಲೆ ವಿಶ್ವಾಸ ಹಾಗೂ ನಂಬಿಕೆ ಇಟ್ಟು ಸದರಿ ಚೆಕ್ ಗಳಲ್ಲಿ ಒಂದನ್ನು ಸಂಖ್ಯೆಃ031926 ದಿನಾಂಕಃ30.11.2021 ರಂದು ಕರ್ನಾಟಕ ಬ್ಯಾಂಕ್, ಶೃಂಗೇರಿ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ದಿನಾಂಕಃ30.11.2021 ರಂದು ಅಮಾನ್ಯವಾಗಿರುತ್ತದೆ ಎಂದು ಹೇಳಿದ್ದಾರೆ, ಇದಕ್ಕೆ ನೀವೇನ್ನು ಹೇಳುತ್ತೀರಿ?

ಉತ್ತರ ಃ

ಪ್ರಶ್ನೆ.4 : ಪ್ರಾಸಾ.1 ರವರು ಮುಂದುವರೆದು ಫಿರ್ಯಾದುದಾರರು ದಿನಾಂಕ:20.12.2021 ರಂದು ರಂದು ವಕೀಲರ ಮೂಲಕ ನೋಂದಾಯಿತ ಅಂಚೆ ಮೂಲಕ ಕಾನೂನು ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ತಲುಪಿದ 15 ದಿನಗಳೊಳಗಾಗಿ ರೂ.6,00,000/- ಗಳನ್ನು ಮರುಪಾವತಿ ಮಾಡಬೇಕೆಂದು ನಮೂದಿಸಿ ಕಳುಹಿಸಿದ್ದು, ಆದರೆ ಸದರಿ ನೋಟೀಸನ್ನು ನೀವು ಆರೋಪಿ ಖುದ್ದಾಗಿ ತೆಗೆದುಕೊಂಡಿದ್ದರೂ ನೀವು ಆರೋಪಿ ನೋಟಿಸ್‌ಗೆ ಉತ್ತರವನ್ನಾಗಲಿ ಅಥವಾ ಹಣವನ್ನಾಗಲಿ ಮರುಪಾವತಿ ಮಾಡಿರುವುದಿಲ್ಲ ಎಂದು ಹೇಳಿದ್ದಾರೆ, ಇದಕ್ಕೆ ನೀವೇನ್ನು ಹೇಳುತ್ತೀರಿ?

ಉತ್ತರ :

ಪ್ರಶ್ನೆ.5 : ಪ್ರಾಸಾ.1 ರವರು ಮುಂದುವರೆದು ನೀವು ಆರೋಪಿ ಮೋಸ ಮಾಡಬೇಕೆನ್ನುವ ಉದ್ದೇಶದಿಂದಲೇ ಈ ರೀತಿಯ ಚೆಕ್ಕನ್ನು ಅವರಿಗೆ ಕೊಟ್ಟಿರುತ್ತೀರಿ ಆದುದರಿಂದ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ಹೇಳಿದ್ದಾರೆ, ಇದಕ್ಕೆ ನೀವೇನ್ನು ಹೇಳುತ್ತೀರಿ?

ಉತ್ತರ :

ಪ್ರಶ್ನೆ.6 : ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ?

ಉತ್ತರ :

ಪ್ರಶ್ನೆ.7 : ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರ :

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : 27-09-2022.

(ದಾಸರಿ ಕ್ರಾಂತಿ ಕಿರಣ್ )
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಶೃಂಗೇರಿ.

ಆರೋಪಿಯ ಸಹಿ: